**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.09/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ನಸರುಲ್ಲಾ |
| ತಂದೆಯ ಹೆಸರು | : | ರಹಮತವುಲ್ಲಾ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಮುಖ್ಯಾಧಿಕಾರಿಗಳು, ಕೊಟ್ಟೂರು ಪಟ್ಟಣ ಪಂಚಾಯಿತಿ |
| ವಾಸ ಸ್ಥಳ | : | ಕೊಟ್ಟೂರು |

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 2

ದಿ: 22-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ** :

1. ದಿಃ 10-07-2015 ರಿಂದ ದಿಃ 18-07-2021 ರವರೆಗೆ ನಾನು FDA ಆಗಿ ಹರಿಹರ ನಗರ ಸಭೆ ನಲ್ಲಿ ಕೆಲಸ ಮಾಡಿದ್ದೇನೆ. ದಿಃ 12-09-2020 ರಂದು ಮಧ್ಯಾಹ್ನ 12.20 ಗಂಟೆಗೆ ಹರಿಹರ ನಗರ ಸಿ.ಪಿ.ಐ. ರವರು ಚಾಸಾ-10 ರವರ ಮುಖಾಂತರ ನಮ್ಮ ಮೇಲಾಧಿಕಾರಿಗಳಿಗೆ ಗಾಂಜಾ ಪ್ರಕರಣ ಇದ್ದು ಅದಕ್ಕೆ ಇಬ್ಬರು ಸರ್ಕಾರಿ ನೌಕರರನ್ನು ಪಂಚರಾಗಿ ನೇಮಕ ಮಾಡಿಕೊಳ್ಳಲು ನೋಟಿಸ್ಸು ಜಾರಿ ಮಾಡಿದ್ದರು. ಆ ಪ್ರಕಾರ ನಮ್ಮ ಮೇಲಾಧಿಕಾರಿಗಳು ನನ್ನನ್ನು ಮತ್ತು ಚಾಸಾ-3 ರವರನ್ನು ಪಂಚರಾಗಿ ಮೌಖಿಕವಾಗಿ ನೇಮಕ ಮಾಡಿ ಕಳುಹಿಸಿಕೊಟ್ಟಿದ್ದರು. ನಂತರ ಮಧ್ಯಾಹ್ನ 12.30 ಗಂಟೆಗೆ ನಾನು ಮತ್ತು ಚಾಸಾ-3 ರವರು ಹರಿಹರ ನಗರ ಸಿಪಿ.ಐ. ಕಛೇರಿಗೆ ಹೋದೆವು. ಅಲ್ಲಿ ಚಾಸಾ-4 ಹಾಗೂ ಪೊಲೀಸ್ ಸಿಬ್ಬಂದಿಗಳು ಎಲ್ಲರೂ ಇದ್ದರು ಮತ್ತು ನಮಗೆ ಅವರನ್ನು ಪರಿಚಯ ಮಾಡಿಸಿ, ಹರಿಹರ-ಶಿವಮೊಗ್ಗ ರಾಜ್ಯ

ಹೆದ್ದಾರಿ ರಸ್ತೆಯ ಭರಣಿ ಹೋಟೆಲ್ ಮುಂಭಾಗದ ಹನಗವಾಡಿ ಗ್ರಾಮದ ಬಳಿ 3 ಜನ ಆರೋಪಿತರು ಗಾಂಜಾ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿದೆ ಅಂತ ತಿಳಿಸಿದರು. ನಂತರ ನಮ್ಮನ್ನು ಪಂಚರಾಗಿ ಬನ್ನಿ ಅಂತ ನಮಗೆ ನೋಟಿಸ್ಸು ಜಾರಿ ಮಾಡಿದರು. ಆ ನೋಟಿಸನಉನ ಈಗ ನಾನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿನ ನನ್ನ ಸಹಿಯನ್ನು ನಿಪಿ-1(ಎ) ಅಂತ ಗುರುತಿಸಲಾಯಿತು.

2. ನಂತರ ಚಾಸಾ-1 ರವರು ನನ್ನನ್ನು, ಚಾಸಾ-3 ರವರನ್ನು, ಚಾಸಾ-4 ಹಾಗೂ ಸಿಬ್ಬಂದಿಗಳನ್ನು ಕರೆದುಕೊಂಡು ಮತ್ತು ಲ್ಯಾಪಟಾಪ್, ಪ್ರಿಂಟರ್, ಅರಗು ಹಾಗೂ ಇತರೆ ಸಾಮ್ಯಾಗ್ರಿಗಳನ್ನು ತೆಗೆದುಕೊಂಡು ಮಧ್ಯಾಹ್ನ 12.50 ಗಂಟೆಗೆ ಠಾಣೆಯನ್ನು ಬಿಟ್ಟೆವು. 10 ನಿಮಿಷಕ್ಕೆ ಮಾಹಿತಿ ಇದ್ದ ಸ್ಥಳಕ್ಕೆ ತಲುಪಿ, ಸ್ವಲ್ಪ ದೂರದ ಮರೆಯಲ್ಲಿ ಗಾಡಿಯನ್ನು ನಿಲ್ಲಿಸಿ ವೀಕ್ಷಿಸಿದರು. ಆಗ ಭರಣಿ ಹೋಟೆಲ್ ಮುಂಭಾಗದಲ್ಲಿ ಕೆ.ಎ.14 ಬಿ.8176 ಕಪ್ಪು ಮತ್ತು ಹಳದಿ ಬಣ್ಣದ ಆಟೋದಲ್ಲಿ 03 ಜನರು ಇದ್ದರು, ಅವರ ಪೈಕಿ ಮಲ್ಲಿಕಾರ್ಜುನ ಎಂಬುವವರ ಬಳಿ ನೀಲಿ ಬಣ್ಣದ ಬ್ಯಾಗ್ ಇತ್ತು, ರಾಹುಲ್ ಎಂಬುವವರ ಬಳಿ ಕೆಂಪು ಬಣ್ಣದ ಬ್ಯಾಗ್ ಇತ್ತು. ಅವರು ಏನೋ ಒಂದು ಮಾರಾಟ ಮಾಡುತ್ತಿರುವುದು ಕಂಡು ಬಂದಿತು, ಆದ್ದರಿಂದ ಪೊಲೀಸರು ಅವರನ್ನು ಸುತ್ತುವರೆದು ಹಿಡಿದರು. ಅವರನ್ನು ಚೆಕ್ ಮಾಡಲು ಅವರಿಗೆ ನೋಟಿಸ್ಸು ಕೊಟ್ಟರು. ಚಾಸಾ-1 ರವರು ಅವರ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದರು. ಆಗ ತಮ್ಮ ಹೆಸರನ್ನು ರಾಹುಲ್, ಮಲ್ಲಿಕಾರ್ಜುನ ಮತ್ತು ಪ್ರಮೋದ ಅಂತ ಹೇಳಿದರು. ರಾಹುಲ್ ಎಂಬುವವರ ಬಳಿ ಇದ್ದ ಕೆಂಪು ಬಣ್ಣದ ಬ್ಯಾಗ್ ನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಸೊಪ್ಪು ಮತ್ತು ಮೊಗ್ಗಿನಂತಹ ವಸ್ತು ಕಂಡು ಬಂತು. ಅದರ ವಾಸನೆ ಗಾಂಜಾದ ವಾಸನೆ ಬರುತ್ತಿತ್ತು. ಆದ್ದರಿಂದ ಅದು ಗಾಂಜಾ ಅಂತ ಗೊತ್ತಾಯಿತು. ನಂತರ ಮಲ್ಲಿಕಾರ್ಜುನರವರ ನೀಲಿ ಬಣ್ಣದ ಬ್ಯಾಗ್ ನ್ನು ಪರಿಶೀಲನೆ ಮಾಡಿದಾಗ, ಅವರ ಬಳಿ ಸಹ ಅದೇ ತರಹ ಗಾಂಜಾ ವಾಸನೆ ಬರುವ ವಸ್ತು ಇತ್ತು. ತಲಾ 02 ಬ್ಯಾಗ್ ಗಳಿದ್ದ ವಸ್ತುಗಳನ್ನು ತೂಕ

ಮಾಡಿ ನೋಡಿದಾಗ ಅದು ತಲಾ 2.45 ಗ್ರಾಂ. ತೂಕ ಇದ್ದವು. ಪ್ರಮೋದರವರ ಅಂಗ ಶೋಧನೆ ಮಾಡಿದಾಗ ಅವರ ಪ್ಯಾಂಟಿನ ಬಲ ಜೇಬಿನಲ್ಲಿ 11 ಸಣ್ಣ ಪ್ಲಾಸ್ಟಿಕ್ ಕವರ್ ಗಳು ಇದ್ದವು, ಅದರಲ್ಲಿ ಗಾಂಜಾ ಸೊಪ್ಪು ಇತ್ತು, ಅದನ್ನು ತೂಕ ಮಾಡಿ ನೋಡಿದಾಗ 80 ಗ್ರಾಂ. ಗಾಂಜಾ ಇತ್ತು ಮತ್ತು ಅವರ ಪ್ಯಾಂಟ್ ನ ಎಡ ಜೇಬಿನಲ್ಲಿ 23 ಸಣ್ಣ ಪಾಲಿಥಿನ್ ಕವರ್ ಗಳು ಇದ್ದವು. ನಂತರ ಅವುಗಳನ್ನು ಒಂದು ಬ್ಯಾಗ್ ನಲ್ಲಿ ಹಾಕಿ ಸೀಲ್ ಮಾಡಲಾಯಿತು. ನಂತರ ಆರೋಪಿತರು ತಂದಿದ್ದ ಆಟೋವನ್ನು ಸಹ ಜಪ್ತು ಮಾಡಿ, ಪಂಚನಾಮೆ ಮಧ್ಯಾಹ್ನ 1.30 ರಿಂದ 3.15 ರವರೆಗೆ ಮಾಡಿದರು. ಆ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ. ಪಂಚನಾಮೆಯನ್ನು ಈಗ ನೋಡುತ್ತಿದ್ದು, ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-2 ಎಂದು ಅದರಲ್ಲಿನ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪಂಚನಾಮ ಮಾಡುವ ಕಾಲಕ್ಕೆ 10 ಫೋಟೋವನ್ನು ತೆಗೆದಿದ್ದು ಅವುಗಳನ್ನು ನಿಪಿ-3 ರಿಂದ ನಿಪಿ-12 ಎಂದು ಗುರುತಿಸಲಾಯಿತು.

3. ಆ ದಿನ ವಶಪಡಿಸಿಕೊಂಡು ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. fast track ಎಂಬ ಹೆಸರಿನ ಕೆಂಪು ಬಣ್ಣದ ಬ್ಯಾಗ್, ಇನೋ ಅಂತ ಹೆಸರಿನ ಬೂದುಬಣ್ಣದ ನೀಲಿಯಲ್ಲಿರುವ ಕಾಲೇಜು ಬ್ಯಾಗ್, ರಾಹುಲ್ ರವರ ಬಳಿ ಕೆಂಪು ಬಣ್ಣದ ಬ್ಯಾಗ್, ಪ್ರಮೋದ್ ರವರ ಎಡ ಜೇಬಿನಲ್ಲಿ ಬಳಿ ದೊರೆತ 23 ಖಾಲಿ ಪ್ಲಾಸ್ಟಿಕ್ ಕವರ್ ಗಳು ಬಲ ಜೇಬಿನಲ್ಲಿ 80 ಗ್ರಾಂ ತೂಕವುಳ್ಳ 11 ಕವರ್ ಗಳು, 3 ಮಾದರಿ ಗಾಂಜಾ ಸೀಲ್ಡ್ ಬ್ಯಾಗ್ ಇವುಗಳನ್ನು ಎಂ ಓ 1 ರಿಂದ 7 ಎಂದು ಗುರುತಿಸಲಾಯಿತು. 80 ಗ್ರಾಂ ತೂಕವುಳ್ಳ 11 ಕವರ್ ಗಳು ಪಿ ಪಿ ರವರು ಲಭ್ಯವಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ-3 ರಲ್ಲಿ ಕಾಣುವ ಆಟೋ ವನ್ನು ಆ ದಿನ ಪೋಲೀಸರು ವಶಪಡಿಸಿಕೊಂಡಿರುತ್ತಾರೆ. ಆ ದಿನ ಕಂಡು ಬಂದ ಆರೋಪಿತರು ಅಂದರೆ ವಿ ಸಿ ಮುಖಾಂತರ ಕಾಣುತ್ತಿರುವ 2 ಆರೋಪಿ ಮತ್ತು ನ್ಯಾಯಾಲಯದ ಮುಂದೆ ಇರುವ ಒಬ್ಬ ಆರೋಪಿ ಇರುತ್ತಾನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.